**ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಬನಶಂಕರಿ 2 ನೇ ಹಂತದಲ್ಲಿ ವಾಸವಾಗಿರುತ್ತೇನೆ. ಆರೋಪಿಯು ಮಲ್ಲೇಶ್ವರಂ ನಲ್ಲಿ ವಾಸವಾಗಿರುತ್ತಾರೆ. ಆರೋಪಿಯು ಪೀಣ್ಯ 2 ನೇ ಹಂತದಲ್ಲಿ ವಾಸವಾಗಿರುವ ಮಾಲ ಎಂಬುವವರ ಮುಖಾಂತರ ಪರಿಚಯವಾಗಿರುತ್ತಾರೆ. ಮಾಲ ಎಂಬುವವರು ಗೃಹಿಣಿಯಾಗಿರುತ್ತಾರೆ. ಆರೋಪಿಯು ಮನೆಯಲ್ಲಿಯೇ ಬಟ್ಟೆ ವ್ಯಾಪಾರ ಮಾಡಿರುತ್ತಾರೆ.

**2.** ಆರೋಪಿಯ ಗಂಡ ಮಾಸ್ಕ್ ತಯಾರಿಸುವ ಕಾರ್ಖಾನೆ ನಡೆಸುತ್ತಾರೆ. ಅವರ ಕಾರ್ಖಾನೆಯು ಮಲ್ಲೇಶ್ವರಂ ನಲ್ಲಿದೆ. ಕಾರ್ಖಾನೆಯ ಹೆಸರು ನನಗೆ ಗೊತ್ತಿಲ್ಲ. ಆರೋಪಿ ಯಾವಾಗ ಯಾವ ಕಾರಣಕ್ಕಾಗಿ ಹಣ ಕೇಳಿದರು ಎಂದರೆ ಸಾಕ್ಷಿಯು 2016 ರಲ್ಲಿ ಆರೋಪಿಯು ಗಾರ್ಮೆಂಟ್ಸ್ ಗಾಗಿ ಸರಕುಗಳನ್ನು ಖರೀದಿ ಮಾಡಲು ನನ್ನಿಂದ ಹಣ ಕೇಳಿದರು. ಆರೋಪಿ ನವೆಂಬರ್ 2016 ರಲ್ಲಿ ಹಣ ನೀಡಿದೆನು. ಹಣ ನೀಡಿದ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ಯಾವ ವಾರ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಬ್ಯಾಂಕ್ ಖಾತೆ ಮುಖಾಂತರ ಆರೋಪಿಗೆ ಒಂದು ಲಕ್ಷ ರೂ. ಹಣ ವರ್ಗಾಯಿಸಿದೆನು. ಆ ಒಂದು ಲಕ್ಷ ಹಣವನ್ನು ಹೊರತುಪಡಿಸಿ ಆರೋಪಿಯೊಂದಿಗೆ ಬೇರೆ ವ್ಯವಹಾರ ಇದೆಯೇ ಎಂದರೆ ಹಣ ಪಡೆದುಕೊಳ್ಳುವುದು ಹಿಂದಿರುಗಿಸುವುದು ಇತ್ತು ಎಂದು ನುಡಿಯುತ್ತಾರೆ. 2016-2017 ನೇ ಇಸವಿಯಲ್ಲಿ ಆರೋಪಿ 5 ಲಕ್ಷ ರೂ. ಹಣ ಪಡೆದುಕೊಂಡಿದ್ದರು. 2017 ನೇ ಇಸವಿಯಲ್ಲಿ ಆರೋಪಿಗೆ 4 ಲಕ್ಷ ರೂ. ಗಳನ್ನು ಬ್ಯಾಂಕ್ ಮುಖಾಂತರ ವರ್ಗಾಯಿಸಿದೆನು. 2016 ರಲ್ಲಿ

ಆರೋಪಿಗೆ ಹಣ ನೀಡಿದಾಗ ಭದ್ರತೆಗಾಗಿ ಆನ್ ಡಿಮಾಂಡ್ ಪ್ರೊನೋಟ್ ನೀಡಿದರು. ಆನ್ ಡಿಮಾಂಡ್ ಪ್ರೊನೋಟ್ ಅನ್ನು ಹಾಜರುಪಡಿಸಿದ್ದೇನೆ.

**ಮುಂದುವರೆದ ಪಾಟೀ ಸವಲಿಗೆ ಕಾಲವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.